ಅ. ದಾ 191/14 ಪಿ.ಡಬ್ಲ್ಯೂ.2

ದಿನಾಂಕಃ 04-04-2019

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟಿಸವಾಲುಃ** ಪ್ರತಿವಾದಿ ಪರ ಶ್ರೀ ವಿ.ಬಿ.ಬಿ. ವಕೀಲರಿಂದ

ನಾನು ಎಸ್.ಎಸ್.ಎಲ್.ಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. ಈ ದಾವೆಯನ್ನು ಸರೋಜಮ್ಮ ಎನ್ನುವವರು ಪರಿಶಿವಯ್ಯ ಎನ್ನುವವರ ವಿರುದ್ದ ಸ ನಂ 79 ರ ಜಮೀನಿನ ಬಾಬ್ತು ದಾಖಲು ಮಾಡಿರುತ್ತಾರೆ. ನಾನು ಹಾಜರುಪಡಿಸಿರುವ ಪ್ರಮಾಣಪತ್ರವನ್ನು ನಾನೇ ಬರೆದುಕೊಟ್ಟಿರುತ್ತೇನೆ. ಸ ನಂ 79 ರ ಜಮೀನಿನ ಒಟ್ಟು ವಿಸ್ತೀರ್ಣ 3 ಎಕರೆ 20 ಗುಂಟೆ. ನನ್ನ ಪ್ರಮಾಣಪತ್ರದಲ್ಲಿ ಸ ನಂ 79 ರ ವಿಸ್ತೀರ್ಣ 3 ಎಕರೆ ಎಂದು ನಮೂದು ಮಾಡಿದ್ದೇನೆ ಎಂದರೆ ಸರಿ. ಸ ನಂ 79 ರ ಜಮೀನಿನ ಒಟ್ಟು ವಿಸ್ತೀರ್ಣ 7 ಎಕರೆ 12 ಗುಂಟೆ ಎಂದರೆ ಸರಿಯಲ್ಲ. ಸ ನಂ 79 ರ ಜಮೀನಿಗೆ ಪೂರ್ವಕ್ಕೆ ಸ ನಂ 86 . ಪಶ್ಚಿಮಕ್ಕೆ ಸರ್ಕಾರಿ ರಸ್ತೆ , ಉತ್ತರಕ್ಕೆ ಸ ನಂ 79 ರಲ್ಲಿ ಜಲೀಲ್‌ಸಾಬರ್ ರವರಿಗೆ ಸೇರಿದ ಜಮೀನು ದಕ್ಷಿಣಕ್ಕೆ ಸ ನಂ 80. ಸ ನಂ 79 ರ ಪೂರ್ವಕ್ಕೆ 80 ನೇ ಸ .ನಂ ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಸರ್ಕಾರಿ ಓಣಿ ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಉತ್ತರಕ್ಕೆ ಜಲೀಲ್ ಸಾಬರ ಜಮೀನು ಅಲ್ಲ ಎಂದರೆ ಸರಿಯಲ್ಲ. ಜಲೀಲ್ ಸಾಬ್ರವರ ಮೊದಲಿಗೆ ಶಿವನಯ್ಯನವರ ಸ್ವಾಧೀನದಲ್ಲಿತ್ತು. ದಾವಾಆಸ್ತಿ ಮಿಠಾಯಿ ಚನ್ನಬಸಪ್ಪನಿಗೆ ಸೇರಿತ್ತು ಎನ್ನುವುದಕ್ಕೆ ನಾನು ದಾಖಲೆ ನೋಡಿಲ್ಲ. ಆದರೆ ಅವರು ವ್ಯವಸಾಯ ಮಾಡುತ್ತಿದ್ದುದ್ದನ್ನು ನೋಡಿದ್ದೆನು. ಸದರಿ ಮಿಠಾಯಿ ಚೆನ್ನಬಸಪ್ಪ 1945 ನೇ ಸಾಲಿನಲ್ಲಿ ಮೃತಪಟ್ಟಿದ್ದರು. ಸದರಿ ಮಿಠಾಯಿ ಚೆನ್ನಬಸಪ್ಪನನ್ನು ನಾನು ನೋಡೇ

ಇಲ್ಲ ಎಂದರೆ ಸರಿಯಲ್ಲ. ನನ್ನ ವಯಸ್ಸು ಈಗ 60 ವರ್ಷ. ಮಿಠಾಯಿ ಚೆನ್ನಬಸಪ್ಪನವರು ಮಿಠಾಯಿ ಅಂಗಡಿ ನಡೆಸುತ್ತಿದ್ದರು. ಮಿಠಾಯಿ ಚೆನ್ನಬಸಪ್ಪ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದು ತೋರಿಸುವಂಥ ಪಹಣಿ ಪ್ರತಿ ಅಥವಾ ಇತರೆ ದಾಖಲೆಗಳನ್ನು ನೋಡಿಲ್ಲ.

ಮಿಠಾಯಿ ಚೆನ್ನಬಸಪ್ಪನ ಮಗ ಬಸೆಟ್ಟಯ್ಯ ಬೆಂಗಳೂರಿನಲ್ಲಿ ಬ್ರೋಕರ್ ಕೆಲಸ ಮಾಡಿಕೊಂಡು ವಾಸ ಇದ್ದರು ಎಂದರೆ ದೊಡ್ಡಮುದುವಾಡಿಗೆ ಬಂದು ಹೋಗುತ್ತಿದ್ದರು. ಸದರಿ ಬಸೆಟ್ಟಯ್ಯ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದು ಪಹಣಿ ಪ್ರತಿಗಳನ್ನು ಹಾಗೂ ಇತರೆ ವಗೈರೆಗಳನ್ನು ನಾನು ನೋಡಿದ್ದೆನು. ಅಂತಹ ದಾಖಲೆಗಳನ್ನು ನಾನು 30 ವರ್ಷದ ಹಿಂದೆ ನೋಡಿದ್ದೆನು. ನಾನು ತಾಲ್ಲೂಕು ಕಛೇರಿಯಲ್ಲಿ ಅಂತಹ ದಾಖಲೆಯನ್ನು ನೋಡಿದ್ದೆನು. ನನ್ನ ಜಮೀನಿನ ದಾಖಲೆಯನ್ನು ನೋಡಲು ಹೋಗಿ ಸದರಿ ದಾಖಲೆಯನ್ನು ನೋಡಿದ್ದೆನು. ಮಿಠಾಯಿ ಬಸಟ್ಟಯ್ಯ ಮೃತಪಟ್ಟು 30 ವರ್ಷ ಆಗಿದೆ. ಮಿಠಾಯಿ ಬಸಟ್ಟಯ್ಯ ಮೃತಪಟ್ಟ ನಂತರ ದಾವಾ ಆಸ್ತಿಯ ಖಾತೆ ಸರೋಜಮ್ಮಳ ಹೆಸರಿಗೆ ಇರುವುದು ಉಪ-ವಿಭಾಗಾಧಿಕಾರಿಗಳವರ ಕಛೇರಿಯಲ್ಲಿ ರದ್ದಾಗಿರುವುದು ನನಗೆ ಗೊತ್ತಿಲ್ಲ. ಸರೋಜಮ್ಮ ಮೃತಪಟ್ಟ ನಂತರ ವಾದಿ ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿದ್ದಾಳೆ. ವಾದಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವುದು, ಅಲ್ಲೇ ವಾಸ ಇರುವುದು ನನಗೆ ಗೊತ್ತಿದೆ. ಮುದುವಾಡಿಯಲ್ಲಿರುವ ವಾದಿಯ ಮನೆ ಬಿದ್ದು ಹೋಗಿದೆ ಎಂದರೆ ಸರಿ. ಸದರಿ ಮನೆ ವಾಸಕ್ಕೆ ಯೋಗ್ಯವಾಗಿಲ್ಲ ಎನ್ನುವುದು ಸರಿ. ಪರಶಿವಯ್ಯನ ಹೆಸರಿಗೆ ಇರುವ ದಾವಾ ಆಸ್ತಿಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

ನನ್ನ ಜಮೀನಿನ ಸ ನಂ 87. ಸದರಿ ಜಮೀನಿಗೆ ಚಕ್ಕುಬಂದಿ ಪಶ್ಚಿಮಕ್ಕೆ ಸ ನಂ 86. ಉತ್ತರಕ್ಕೆ ಸ ನಂ 84. ದಕ್ಷಿಣಕ್ಕೆ ಸ ನಂ 87. ನಾನು ಬಸವೇಶ್ವರ ದೇವಸ್ಥಾನ ಅರ್ಚಕ ಎಂದರೆ ಸರಿ. ನಾನು ಚಿಕ್ಕಮುದುವಾಡಿಯಲ್ಲೂ ಸಹ ದೇವಸ್ಥಾನದ ಪೂಜಾರಿಕೆ ಮಾಡುತ್ತೇನೆ ಎಂದರೆ ಸರಿ. ನಾನು ವ್ಯವಸಾಯಗಾರನಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ನನಗೆ ಸಾಕ್ಷಿ ಹೇಳಲು ನನ್ನನ್ನು ವಾದಿ ಕರೆದುಕೊಂಡು ಬಂದಿದ್ದರು. ನನ್ನ ಜಮೀನಿನ ಬಾಬ್ತು ದಾಖಲೆಯನ್ನು ಹಾಜರುಪಡಿಸಬಲ್ಲೆ. ವಾದಿ ಯಾವತ್ತೂ ಕೂಡ ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ.

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ತಿಳಿಸಿ ಹೇಳಿ, ಕೇಳಿದಾಗ ಅವರು ಅದನ್ನು ಸರಿ ಇದೆ ಎಂದು ಒಪ್ಪಿದ್ದಾರೆ).

ಹಿರಿಯ ಸಿವಿಲ್ ಜಡ್ಜ್, ಜೆಎಂಎಫ್ ಸಿ.
ಕನಕಪುರ.

ಅ. ದಾ 191/14 ಪಿ.ಡಬ್ಲ್ಯೂ.3

ದಿನಾಂಕಃ 04-04-2019

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟಿಸವಾಲುಃ** ಪ್ರತಿವಾದಿ ಪರ ಶ್ರೀ ವಿ.ಬಿ.ಬಿ. ವಕೀಲರಿಂದ

ನಾನು 7 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಹಾಜರುಪಡಿಸಿರುವ ಪ್ರಮಾಣಪತ್ರವನ್ನು ನಾನೇ ತಯಾರು ಮಾಡಿಕೊಟ್ಟಿದ್ದೆನು. ಸದರಿ ಪ್ರಮಾಣಪತ್ರಕ್ಕೆ ನ್ಯಾಯಾಲಯದಲ್ಲಿ ಸಹಿ ಮಾಡಿದ್ದೆನು. ವಾದಿಯ ಅಜ್ಜಿ ಮತ್ತು ನನ್ನ ತಾಯಿ ಅಕ್ಕ-ತಂಗಿಯರು ಎನ್ನುವುದು ಸರಿ. ನಾನು ಮಿಠಾಯಿ ಚೆನ್ನಬಸಪ್ಪನನ್ನು ನೋಡಿಲ್ಲ. ದಾವಾ ಆಸ್ತಿ ಮಿಠಾಯಿ ಚೆನ್ನಬಸಪ್ಪನಿಗೆ ಸೇರಿತ್ತು ಎಂದು ತೊರಿಸುವ ದಾಖಲೆಯನ್ನು ನಾನು ನೋಡಿಲ್ಲ. ಮಿಠಾಯಿ ಚೆನ್ನಬಸಪ್ಪ ಮಿಠಾಯಿ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದರೆ ನಾನು ನೋಡಿಲ್ಲ. ಸದರಿ ಮಿಠಾಯಿ ಚೆನ್ನಬಸಪ್ಪನಿಗೆ ಒಬ್ಬನೇ ಮಗ ಬಸಟ್ಟಯ್ಯ ಎಂದರೆ ಸರಿ . ಸದರಿ ಬಸಟಯ್ಯ ಬೆಂಗಳೂರಿನಲ್ಲಿ ಬ್ರೋಕರ್ ಕೆಲಸ ಮಾಡಿಕೊಂಡು ವಾಸ ಇದ್ದ ಎಂದರೆ ಹೋಗಿ ಬರುತ್ತಿದ್ದ. ಮಿಠಾಯಿ ಚೆನ್ನಬಸಪ್ಪ ಮೃತಪಟ್ಟ ನಂತರ ಬಸಟ್ಟಯ್ಯ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದಕ್ಕೆ ನಾನು ದಾಖಲೆ ನೋಡಿರುವುದಿಲ್ಲ. ಬಸಟಯ್ಯ ಮೃತಪಟ್ಟ ನಂತರ ದಾವಾ ಆಸ್ತಿಯಲ್ಲಿ ಸರೋಜಮ್ಮ ಸ್ವಾಧೀನ ಹೊಂದಿರುವುದಕ್ಕೆ ದಾಖಲೆ ನೋಡಿಲ್ಲ. ಸಾಕ್ಷಿ ಸ್ವತಃ ಖಾತೆ ಮಾಡಿಸಿಕೊಂಡಿದ್ದರೆಂದು ನುಡಿದಿರುತ್ತಾರೆ. ಸದರಿ ಖಾತೆ ರಾಮನಗರದ ಉಪ-ವಿಭಾಗಾಧಿಕಾರಿಗಳವರ ನ್ಯಾಯಾಲಯದಲ್ಲಿ ರದ್ದಾಗಿರುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ವಾದಿಯ ಸ್ವಾಧೀನದಲ್ಲಿರುವುದಕ್ಕೆ ನಾನು ದಾಖಲೆ ನೋಡಿರುವುದಿಲ್ಲ.

ವಾದಿ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ವಾಸ ಇದ್ದಾಳೆ ಎಂದರೆ ಇಲ್ಲಿಗೂ ಬರುತ್ತಾಳೆ. ವಾದಿಯ ಮನೆ ಪಾಳು ಬಿದ್ದು ಅದು ವಾಸಕ್ಕೆ ಯೋಗ್ಯವಾಗಿಲ್ಲ ಎಂದರೆ ಸರಿ. ಈ ದಾವೆಯನ್ನು ಯಾರು ಯಾರ ವಿರುದ್ಧ ಯಾವ ಆಸ್ತಿಯ ಬಾಬ್ತು ದಾಖಲು ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಂಗಡಿ ಇಟ್ಟು ಕೊಂಡಿದ್ದೇನೆ ಎಂದರೆ ಸರಿ. ನಾನು ಅಂಗಡಿಯಲ್ಲಿ ಯಾವಾಗಲೂ ಇರುತ್ತೇನೆ ಎಂದರೆ ಸರಿಯಲ್ಲ, ನನ್ನ ಕಸುಬು ವ್ಯವಸಾಯ. ನನ್ನ ಜಮೀನಿನ ಸ ನಂ 209. ಇತರೆ ಜಮೀನುಗಳ ಸರ್ವೆ ನಂಬರುಗಳು ನನಗೆ ಗೊತ್ತಿಲ್ಲ, ಸ ನಂ 209 ರ ಜಮೀನಿನ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ನನಗೂ ಮತ್ತು ನನ್ನ ಚಿಕ್ಕಪ್ಪನ ಮಕ್ಕಳಿಗೆ ಸೇರಿದೆ. ಸ ನಂ 209 ರ ಚಕ್ಕುಬಂದಿ ಹೇಳಲು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪರಶಿವಯ್ಯನ ಸ್ವಾಧೀನದಲ್ಲಿಲ್ಲ ಎನ್ನುವುದಕ್ಕೆ ನಾನು ದಾಖಲೆ ನೋಡಿಲ್ಲ. ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿಲ್ಲ ಎಂದರೆ ಸರಿ. ವಾದಿ ನನ್ನ ಅಣ್ಣನ ಮಗಳು ಎಂದು ಹೇಳಿ ಆಕೆಗ ಸಹಾಯ ಮಾಡಲು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿ. ಸ ನಂ 79 ರ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ, ಸದರಿ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ.

ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ.

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ತಿಳಿಸಿ ಹೇಳಿ, ಕೇಳಿದಾಗ ಅವರು ಅದನ್ನು ಸರಿ ಇದೆ ಎಂದು ಒಪ್ಪಿದ್ದಾರೆ).

ಹಿರಿಯ ಸಿವಿಲ್ ಜಡ್ಜ್, ಜೆಎಂಎಫ್ ಸಿ.
ಕನಕಪುರ.